


ಬಿದಿರು, ಬೆತ್ತ, ಹುಲ್ಲಿನಿಂದ ನಿರ್ಮಿಸಲಾಗುತ್ತಿದ್ದ ತೋಡರ ಸಾಂಪ್ರದಾಯಿಕ ಮನೆಯ ಮಾದರಿ

## ಅಂತರ್ ಬುಡಕಟ್ಟು ಮದುವೆ ನಿಷಿದ್ಧ

ತೋಡ ಸಮುದಾಯದ ಜನಸಂಖ್ಯೆ ಕಡಿಮೆ ಇರಲು ಅವರಲ್ಲಿ ಈಗಲೂ ಕಠಿಣವಾಗಿರುವ ಅಂತರ್ ಬುಡಕಟ್ಟು ಮದುವೆಗಳ ನಿಷೇಧವೂ ಒಂದು ಕಾರಣ ಆಗಿರಬಹುದು. ಇತರೆಲ್ಲ ಬುಡಕಟ್ಟು ಜನರು ರಕ್ಷಿತಾರಣ್ಯದ ಒಳಗೆ ಒಂದು ಗ್ರಾಮದಲ್ಲಿ ವಾಸಿಸುತ್ತಿದ್ದರೆ, ತೋಡ ಜನರು ಪ್ರತ್ಯೇಕವಾಗಿ ವಾಸಿಸುತ್ತಾರೆ. ತೋಡರ ಮನೆಗಳಿರುವ ಪ್ರದೇಶದಲ್ಲಿ ಇತರ ಬುಡಕಟ್ಟುಗಳ ಮನೆಗಳಿಲ್ಲ. ಹಾಗೆಯೇ ತೋಡ ಸಮುದಾಯದಲ್ಲಿ ಅಂತರ್ ಬುಡಕಟ್ಟು ಮದುವೆ ಸಂಪೂರ್ಣ ನಿಷಿದ್ಧ! 'ಇದುವರೆಗೆ ತೋಡರಲ್ಲಿ ಒಂದು ಅಂತರಜಾತೀಯ ಮದುವೆಯೂ ಆಗಿಲ್ಲವೆ?' ಎಂದು ಜಾನ್ಸಿ ರಾಣಿಯವರನ್ನು ಪ್ರಶ್ನಿಸಿದಾಗ, 'ಇತ್ತೀಚೆಗೆ ಒಂದೆರಡು ಮದುವೆಗಳು ನಡೆದಿವೆ. ಆದರೆ ಅವರನ್ನು ನಮ್ಮ ಬುಡಕಟ್ಟಿನಿಂದ ಹೊರಗೆ ಇಡಲಾಗಿದೆ. ಅವರಿಗೆ ನಮ್ಮ ಹಳ್ಳಿಗಳಿಗೆ ಪ್ರವೇಶ ಇಲ್ಲ. ಇದು ಈಗಲೂ ಕಟ್ಟುನಿಟ್ಟಾದ ನಿಯಮವಾಗಿ ಉಳಿದಿದೆ' ಎಂದು ಉತ್ತರಿಸಿದರು. ಜಾನ್ಸಿ ಕೂಡ ತಮ್ಮ ಸಮುದಾಯದ ವಿದ್ಯಾವಂತ ಯುವಕನನ್ನೇ ಮದುವೆಯಾಗಿದ್ದಾರೆ. ನೀಲಗಿರಿ ರಕ್ಷಿತಾರಣ್ಯದ ಅಂಚುಗಳಲ್ಲಿ ವಾಸಿಸುವ ಇತರ ಬುಡಕಟ್ಟು ಜನಗಳ ಮಧ್ಯೆ ಅಂತರ್‌ಬುಡಕಟ್ಟು ವಿವಾಹಗಳ ನಿಷೇಧಕ್ಕೆ ಕಠಿಣ ನಿಯಮಗಳಿಲ್ಲ.

ತೋಡರಲ್ಲಿ ವರದಕ್ಷಿಣೆ ಇಲ್ಲ. ಮದುವೆಯ ಎಲ್ಲ ಖರ್ಚನ್ನು ವರನೇ ಭರಿಸಬೇಕು. ಕೆಲವು ಮದುವೆಗಳಲ್ಲಿ ಹೆಣ್ಣಿನ ಕಡೆಯವರು ಎಮ್ಮೆಗಳನ್ನು ಗಿಫ್ಟ್ ಆಗಿ ಕೊಡುವುದಿದೆ. ಬಹಳ ಹಿಂದೆ ತೋಡರಲ್ಲಿ ಬಹುಪತಿತ್ವ ಪದ್ಧತಿ ಜಾರಿಯಲ್ಲಿತ್ತಂತೆ. ಅಂದರೆ ಇಬ್ಬರು ಮೂವರು ಸಹೋದರರನ್ನು ಒಬ್ಬಳೇ ಮದುವೆಯಾಗುವುದು. ನೇಪಾಳ ಮತ್ತು ಟಿಬೆಟ್‌ನಲ್ಲಿ ಕಾಣಸಿಗುವ ಈ ಪದ್ಧತಿಗೆ ಕಾರಣ ಮಹಿಳೆಯರ ಜನಸಂಖ್ಯೆ ಕಡಿಮೆ ಇರುವುದು ಎನ್ನಲಾಗುತ್ತಿದೆ. ಆದರೆ ತೋಡರಲ್ಲಿ ಪುರುಷರಿಗಿಂತ ಮಹಿಳೆಯರೇ ಹೆಚ್ಚು. ಜನಸಂಖ್ಯೆಯಲ್ಲಿ ಮಹಿಳೆಯರ ಪಾಲು ಶೇ. 51ರಷ್ಟಿದೆ! ಕೃಷಿ ಜಮೀನನ್ನು ಒಂದೇ ಕುಟುಂಬದಲ್ಲಿ ಉಳಿಸಿಕೊಳ್ಳುವುದೂ ಇದಕ್ಕೆ ಇನ್ನೊಂದು ಕಾರಣ ಎನ್ನುವವರಿದ್ದಾರೆ. ಈಗಂತೂ ಬಹುಪತಿತ್ವ ಇಲ್ಲ ಎನ್ನುವುದು ಜಾನ್ಸಿ ಹೇಳಿದ ಖಚಿತ ಮಾತು.

'ನಮ್ಮ ಬಹುತೇಕ ಉತ್ಸವಗಳು ಹೈನುಗಾರಿಕೆಗೆ ಸಂಬಂಧಿಸಿಯೇ ಇವೆ. ಹೊಸ ವರ್ಷದ ಉತ್ಸವಕ್ಕೆ ಮಾತ್ರವಲ್ಲ, ತೋಡ ಸಮುದಾಯದ ಯಾರೇ ಮೃತರಾದರೂ ಎಲ್ಲ ಉಪಕುಲಗಳ ಪ್ರತಿನಿಧಿಗಳು ಹಾಜರಾಗಬೇಕು. ಅಂತ್ಯಸಂಸ್ಕಾರ ಅಗ್ನಿಸ್ಪರ್ಶದೊಂದಿಗೆ ನಡೆಯುತ್ತದೆ. ಅದಕ್ಕೂ ಮುನ್ನ ಶವದ ಸುತ್ತ ತುದಿಗಾಲಲ್ಲಿ ನಿಂತು ದೈವಸ್ಮರಣೆ ಮಾಡಲಾಗುತ್ತದೆ' ಎಂದು ಟೆಕ್ಕಿಸ್ ಹೇಳಿದರು. ಎಲ್ಲರಿಗೂ ಇಲ್ಲಿ ಎರಡು ಹೆಸರುಗಳಿವೆ. ಉದಾಹರಣೆಗೆ, ಟೆಕ್ಕಿಸ್ ಎನ್ನುವುದು ತೋಡ ಭಾಷೆ ಹೆಸರು. ಮೋಹನ್ ಎನ್ನುವುದು ಹೊರಜಗತ್ತಿಗೆ. ಜಾನ್ಸಿ ಮತ್ತು ರಾಣಿ ಎನ್ನುವುದೂ ಹಾಗೆಯೇ!

ಅಲ್ಲಿಂದ ಟೆಕ್ಕಿಸ್ ತಮ್ಮ ಮನೆಯೊಳಕ್ಕೆ ಕರೆದೊಯ್ದರು. ಆಧುನಿಕ ಸಮಾಜದ ಎಲ್ಲ ಅನುಕೂಲಗಳೂ ಇರುವ ಮನೆ. ಗೋಡೆಯಲ್ಲಿ ತೂಗುಹಾಕಿದ ಫೋಟೊಗಳಲ್ಲಿದ್ದ ತಮ್ಮ ಸಂಸಾರವನ್ನು ಪರಿಚಯಿಸಿದರು. ದೆಹಲಿ ಮತ್ತಿತರ ಕಡೆ ಕುಟುಂಬಸಮೇತ ಪ್ರವಾಸ ಹೋದ ಫೋಟೊಗಳನ್ನೂ ಫ್ರೇಮ್ ಹಾಕಿ ಇಡಲಾಗಿತ್ತು. 'ಕ್ಷಮಿಸಿ, ಮನೆಯಾಕೆ ಹೊರಗೆ ಹೋಗಿದ್ದಾರೆ. ನಿಮಗೆ ತಿನ್ನಲು ಏನಾದರೂ ಕೊಡಬಹುದಿತ್ತು' ಎಂದು ಟೆಕ್ಕಿಸ್ ಬೇಜಾರು ಮಾಡಿಕೊಂಡದ್ದೂ ನಡೆಯಿತು. ಪಕ್ಕದ ಮನೆಯ ವಯಸ್ಸಾದ ಮಹಿಳೆಯೊಬ್ಬರು ಮನೆಯೊಳಕ್ಕೆ ಇಣುಕಿ ತೋಡ ಭಾಷೆಯಲ್ಲಿ ವಿಚಾರಿಸಿಕೊಂಡು ಹೋದರು. ತೋಡ ಭಾಷೆಗೆ ಲಿಪಿ ಇಲ್ಲ. ಮೌಖಿಕ ಪರಂಪರೆಯಲ್ಲೇ ಆ ಭಾಷೆ ಸಾವಿರಾರು ವರ್ಷಗಳಿಂದ ಸ್ವತಂತ್ರವಾಗಿ ಉಳಿದುಕೊಂಡು ಬಂದಿದೆ.

ಜಾನ್ಸಿ ರಾಣಿಯವರ ಜೊತೆಗೆ ಹಿಂದಿನ ದಿನ ಮಾತಾಡುವಾಗ ಆ ಭಾಷೆಯ ಕುರಿತು ಹಲವು ವಿವರಗಳು ಸಿಕ್ಕಿದವು. ತೋಡ ಭಾಷೆಯಲ್ಲಿ ನನ್ನ ಜೊತೆ ಜಾನ್ಸಿಯವರು ಮಾತನಾಡಿದಾಗ ತಮಿಳಿನ ಹೋಲಿಕೆ ಇಲ್ಲವೇ ಇಲ್ಲ ಎನ್ನುವಂತಿತ್ತು. ಕೆಲವು ಶಬ್ದಗಳು ಪೋರ್ಚುಗೀಸರ ಭಾಷೆಯನ್ನು ಹೋಲುವಂತಿದ್ದವು. 'ತೋಡ ಸಮುದಾಯದ ಇನ್ನೊಂದು ವೈಶಿಷ್ಟ್ಯವೆಂದರೆ, ನಾವು ನೃತ್ಯ ಮಾಡುವಾಗ ಚಪ್ಪಾಳೆ ಹೊಡೆಯುತ್ತಾ ಹಾಡುತ್ತೇವೆ. ಯಾವುದೇ ಸಂಗೀತ ಪರಿಕರಗಳನ್ನು ಬಳಸುವುದಿಲ್ಲ. ಹಾಡಿನಲ್ಲಿ ನಮ್ಮ ಸಂಸ್ಕೃತಿಯ ಕುರಿತು, ಪವಿತ್ರ ಎಮ್ಮೆಗಳ ಕುರಿತು ಸಾಹಿತ್ಯ ಇರುತ್ತದೆ' ಎಂದು ಜಾನ್ಸಿ ವಿವರಿಸಿದಾಗ ಅಚ್ಚರಿಯೆನ್ನಿಸಿತು.

ಟೆಕ್ಕಿಸ್ ಮೋಹನ್‌ಗೆ ಬೀಳ್ಕೊಡುತ್ತಾ 'ಮುಂದಿನ ಡಿಸೆಂಬರ್‌ನಲ್ಲಿ ನಿಮ್ಮ ಹೊಸ ವರ್ಷದ ಹಬ್ಬಕ್ಕೆ ಬರಬಹುದೆ?' ಎಂದು ಕೇಳಿದೆ. ಅವರು ಸುಮ್ಮನೆ ನಕ್ಕರು. ಸಾಮಾನ್ಯವಾಗಿ ತೋಡರು ಅಪರಿಚಿತರ ಜೊತೆಗೆ ಹೆಚ್ಚು ಬೆರೆಯಲು ಇಷ್ಟಪಡುವುದಿಲ್ಲ ಎಂದುಕೊಂಡೆ. ಡಿಸೆಂಬರ್‌ನಲ್ಲಿ ಖಂಡಿತ ಉತ್ಸವವನ್ನು ನೋಡಲು ಹೋಗಬೇಕು ಎಂದು ಮನಸ್ಸಲ್ಲೇ ನಿರ್ಧರಿಸಿದೆ.

ಪ್ರತಿಕ್ರಿಯಿಸಿ: feedback@sudha.co.in